ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೩೩ ಕೊಪ್ಪ ೧೦-೪-೮೩ ಭಾನುವಾರ ಬೆಲೆ ೨೦ ಪೈಸೆ

ರೈತ ಸಮ್ಮೇಳನ

ಕೊಪ್ಪ: ಕೊಪ್ಪ ತಾಲ್ಲೂಕು ರೈತ ಸಮ್ಮೇಳನ ಇದೇ ೧೭ ರಂದು ಇಲ್ಲಿನ ಪುರಭವನದಲ್ಲಿ ಮಳಗೆ ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ರಾಜ್ಯ ರೈತಸಂಘದ ಅಧ್ಯಕ್ಷ ಹೆಚ್. ಎಸ್. ರುದ್ರಪ್ಪ, ಕಾರ್ಯದರ್ಶಿ ಎನ್. ಡಿ. ಸುಂದರೇಶ್, ಸಂಚಾಲಕ ಪ್ರೊ|| ಎಂ. ಡಿ. ನಂಜುಂಡಸ್ವಾಮಿ ಮುಂತಾದವರು ರೈತರನ್ನುದ್ದೇಶಿಸಿ ಮಾತನಾಡುವರು.

ನಂತರ ನಡೆಯುವ ಮೆರವಣಿಗೆಯಲ್ಲಿ ರೈತರು ತಮ್ಮ ಗಾಡಿ, ಟಿಲ್ಲರ್ ಹಾಗೂ ಟ್ರ್ಯಾಕ್ಟರ್‌ಗಳ ಸಮೇತ ಭಾಗವಹಿಸಬೇಕೆಂದು ಕೋರಲಾಗಿದೆ.

ಯುವಕ ಸಂಘಕ್ಕೆ ನಿವೇಶನ ದಾನ

ಕೊಪ್ಪ: ಇಲ್ಲಿನ 'ಭಾರತ್ ಅಕ್ಕಿಗಿರಣಿ' ವಿಸ್ತರಣದಲ್ಲಿ ನೇತಾಜಿ ಯುವಕ ಸಂಘದ ಉದ್ಘಾಟನೆಯನ್ನು ಏಪ್ರಿಲ್ ೬ ರಂದು ಶಾಸಕ ಹೆಚ್. ಜಿ. ಗೋವಿಂದಗೌಡರು ಬಿ. ಜಿ. ಚಿದಂಬರ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಉಚಿತ ನಿವೇಶನಗಳ [illegible] ಗುವಳಿ ಪತ್ರವನ್ನು ಗುಣವಂತಿ ಪರಮೇಶ್ವರ ವಿತರಣೆ ಮಾಡಿದರು.

ಭಾರತ್ ಅಕ್ಕಿಗಿರಣಿ ಮಾಲೀಕರು ೮ ಜನತಾ ನಿವೇಶನಗಳ ಖಾಲಿ ಜಾಗವನ್ನು ಯುವಕ ಸಂಘ ಮತ್ತು ಶಾಲಾ ಕಾಲೇಜಿನ ಕಟ್ಟಡಕ್ಕಾಗಿ ದಾನ ಮಾಡಿದರು.

ನ. ರಾ. ಪುರದಲ್ಲಿ ಮಾರಿಹಬ್ಬದ ದಿನ

ಕೋಣ ಬಲಿ ವಿವಾದ: ಗಾಳಿಯಲ್ಲಿ ಗುಂಡು

ನರಸಿಂಹರಾಜಪುರ: ಇಲ್ಲಿ ಐದು ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ನಡೆಯುವ ಮಾರಿ ಜಾತ್ರೆಯಲ್ಲಿ ಹರಕೆ ಕೋಣ ಕಡಿಯಬೇಕು-ಬೇಡ ಎಂಬ ವಿವಾದ ಪೋಲೀಸರು ಗಾಳಿಯಲ್ಲಿ ಗುಂಡು ಹಾರಿಸುವ ಮಟ್ಟಕ್ಕೆ ಹೋಯಿತು.

ಕೋಣ ಕಡಿಯಬಾರದೆನ್ನುವ ಗುಂಪಿನವರು ಪೋಲೀಸರಿಗೆ ತಿಳಿಸಿ, ಕೋಣವನ್ನು ಠಾಣೆಗೆ ತಂದಿದ್ದು ಅದನ್ನು ಅಮಾನತುಪಡಿಸಲಾಗಿತ್ತು. ಆದರೆ ಏ. ೫ ರ ರಾತ್ರಿ ದೇವರ ಮೆರವಣಿಗೆ ಪೋಲೀಸ್ ಠಾಣೆಯ ಬಳಿಗೆ ಬಂದಾಗ ಸುಮಾರು ೨ ಸಾವಿರದಷ್ಟಿದ್ದ ಜನರ ಗುಂಪು ಕೋಣವನ್ನು ಠಾಣೆಯಿಂದ ಬಿಡಿಸಿಕೊಳ್ಳುವ ಬಲಾತ್ಕಾರಕ್ಕೆ ಮುಂದಾಯಿತು. ಈ ಸುದ್ದಿ ತಿಳಿದ ಕೊಪ್ಪ ಸರ್ಕಲ್ ಇನ್ಸ್‌ಪೆಕ್ಟರ್ ತಮ್ಮ ಸಿಬ್ಬಂದಿ ಮತ್ತು ಶೃಂಗೇರಿ ಸಬ್ ಇನ್ಸ್‌ಪೆಕ್ಟರ್ ಜೊತೆಗೂಡಿ ನ. ರಾ. ಪುರಕ್ಕೆ ಧಾವಿಸಿದರು.

ತಾಲ್ಲೂಕು ಮ್ಯಾಜಿಸ್ಟ್ರೇಟ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಶಾಂತಿಯಿಂದ ಚದುರುವಂತೆ ಜನರ ಗುಂಪಿಗೆ ಮನವಿ ಮಾಡಿಕೊಂಡರು. ಅದಕ್ಕೆ ಜಗ್ಗದ ಗುಂಪಿನ ಮೇಲೆ ಲಘು ಲಾಠಿ ಪ್ರಹಾರ ಮಾಡಿದಾಗ, ಉದ್ರೇಕಗೊಂಡ ಜನರು ಕಲ್ಲು, ಇಟ್ಟಿಗೆಗಳಿಂದ ಪೋಲೀಸರ ಮೇಲೆ ದಾಳಿ ನಡೆಸಿದರು. ಸರ್ಕಲ್ ಇನ್ಸ್‌ಪೆಕ್ಟರ್, ಒಬ್ಬರು ಹೆಡ್ ಕಾನ್‌ಸ್ಟೆಬಲ್, ಮೂವರು ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ೭ ಮಂದಿ ಪೇದೆಗಳು ಗಾಯಗೊಂಡರು. ಠಾಣೆಯ ಹೆಂಚುಗಳು ಪುಡಿ ಪುಡಿಯಾದವು. ವಶಪಡಿಸಿಕೊಂಡಿದ್ದ ಒಂದು ಕಾರು ಮತ್ತು ಠಾಣೆಯ ನಾಮಫಲಕ ಜಖಂಗೊಂಡವು.

ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಪೋಲೀಸರು ಕೋಣವನ್ನು ಬಿಡುಗಡೆಮಾಡಿ, ಗಾಳಿಯಲ್ಲಿ ೭ ಸುತ್ತು ಗುಂಡು ಹಾರಿಸಿದಾಗ ಜನ ಚದುರಿದರು. ಕನ್ನಿಸಂಸ್ಥೆಯಲ್ಲಿದ್ದ, ಪೋಲೀಸರ ಜಾಣ್ಮೆ ಮತ್ತು ಸೌಮ್ಯ ವರ್ತನೆಯಿಂದಾಗಿ ಜೀವ ಹಾನಿಯಿಲ್ಲದೆ ಪರಿಸ್ಥಿತಿ ಹತೋಟಿಗೆ ಬಂತು.

ಈ ಸಂಬಂಧದಲ್ಲಿ ೭ ಜನರನ್ನು ಬಂಧಿಸಲಾಗಿದ್ದು, ಏ. ೬ ರಿಂದ ೩ ದಿನಗಳವರೆಗೆ ಸೆ. ೧೪೪ ರನ್ವಯ ನಿಷೇಧಾಜ್ಞೆಯನ್ನು ವಿಧಿಸಿ ಉನ್ನತಾಧಿಕಾರಿಗಳು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ. ಕೋಣವನ್ನು ಸಾರ್ವಜನಿಕವಾಗಿ ಬಲಿ ಕೊಟ್ಟದ್ದಕ್ಕೆ ಮೊಕದ್ದಮೆ ದಾಖಲುಮಾಡಿಕೊಂಡು ತನಿಖೆ ಮುಂದುವರಿಯುತ್ತಿದೆ.

ಗಲಭೆ: ಮೊಕದ್ದಮೆ

ಕೊಪ್ಪ: ಏ. ೭ ರ ರಾತ್ರಿ ತಾವು ಕೇಳಿದ್ದ ಲೈಟ್ನಿಂಗ್ ಟ್ರಂಕ್‌ಕಾಲ್ ತಡವಾಯಿತೆಂದು ಅರಣ್ಯ ಇಲಾಖೆಯ ಇಬ್ಬರು ನೌಕರರು ದೂರವಾಣಿ ಕೇಂದ್ರಕ್ಕೆ ನುಗ್ಗಿ ಗಲಭೆ ಮಾಡಿದರೆಂದು ದೂರಲಾಗಿದೆ. ಈ ಬಗ್ಗೆ ದೂರವಾಣಿಯ ಜೂನಿಯರ್ ಇಂಜಿನಿಯರ್ ಅವರ ದೂರಿನ ಮೇರೆಗೆ ಪೋಲೀಸರು ಓಬಳನಾಯ್ಕ ಮತ್ತು ಇನ್ನೊಬ್ಬರ ಮೇಲೆ ಮೊಕದ್ದಮೆ ದಾಖಲು ಮಾಡಿದ್ದಾರೆಂದು ತಿಳಿದುಬಂದಿದೆ.

'ಶೃಂಕೋನ' ಸಂ|| ಮೇಲೆ

ಮಾನ ನಷ್ಟ ದಾವೆ

ಶೃಂಗೇರಿ: ಇಲ್ಲಿಂದ ಪ್ರಕಟವಾಗುತ್ತಿರುವ "ಶೃಂಕೋನ" ವಾರಪತ್ರಿಕೆಯ ಸಂಪಾದಕರೂ ಹಾಗೂ ಪ್ರಕಾಶಕರೂ ಆಗಿರುವ ಎನ್. ಎಸ್. ಚಂದ್ರಶೇಖರ್ ಅವರ ಮೇಲೆ ಅವರು ಪ್ರಕಟಿಸಿದ್ದ "ನಾಗಪ್ಪನ ಕೊಲೆ ಪ್ರಕರಣ" ಎಂಬ ವರದಿಯ ಸಂಬಂಧದಲ್ಲಿ ನರಸಿಂಹರಾಜಪುರ ಪ್ರಥಮ ದರ್ಜೆ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆಯನ್ನು ಹೂಡಿರುವುದಾಗಿ ಹೆಚ್.ವಿ.ನಾಗಭೂಷಣರಾವ್ (ನಾಗೇಶ್) ಅವರು ತಿಳಿಸಿದ್ದಾರೆ.

"ಗುಳಮಾವಿನ ತೊಪ್ಪೆ ಅಕ್ರಮ ಇಲ್ಲ"

ಶೃಂಗೇರಿ: ಈ ವರ್ಷ ಶೃಂಗೇರಿ ಅರಣ್ಯ ವಲಯದಲ್ಲಿ ನಡೆಯುತ್ತಿರುವ ಗುಳಮಾವಿನ ಮರದ ತೊಪ್ಪೆಯ ಸಂಗ್ರಹ ಮತ್ತು ಸಾಗಣೆಯಲ್ಲಿ ಅಕ್ರಮಗಳೇನೂ ಇಲ್ಲವೆಂದು ವಲಯ ಅರಣ್ಯಾಧಿಕಾರಿ ಸೂರ್ಯಾಚಾರ್ "ಮುಂಜಾವು"ಗೆ ತಿಳಿಸಿದ್ದಾರೆ.

ಈ ಭಾಗದ ಕಾಡುಗಳಲ್ಲಿ ವ್ಯಾಪಕವಾಗಿ ಮರದ ತೊಪ್ಪೆಯನ್ನು ಕೆತ್ತಲಾಗುತ್ತಿದೆಯೆಂದು ಪತ್ರಿಕೆಗೆ ಬಂದಿದ್ದ ದೂರುಗಳ ಬಗ್ಗೆ ವಿಚಾರಿಸಿದಾಗ ಅವರು ಈ ರೀತಿ ತಿಳಿಸಿದ್ದಾರೆ. ಈಚೆಗೆ ಬೇಗಾರಿನಲ್ಲಿ ಗುಳಮಾವಿನ ತೊಪ್ಪೆ ಸಹಿತ ಲಾರಿಯೊಂದನ್ನು ಗ್ರಾಮಸ್ಥರು ತಡೆಹಿಡಿದು ಎರಡು ದಿನ ನಿಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಗುತ್ತಿಗೆ

ಊದುಬತ್ತಿ ತಯಾರಿಕೆಯಲ್ಲಿ ಬಹಳ ಬೇಡಿಕೆ ಇರುವ ಈ ತೊಪ್ಪೆಯನ್ನು ಸಂಗ್ರಹಿಸಿ ಮಾರುವ ಗುತ್ತಿಗೆಯನ್ನು ಈ ವರ್ಷ ಕೊಪ್ಪದ ಗಿರಿಜನ ಸೇವಾ ಸಹಕಾರ ಸಂಘಕ್ಕೆ ಅರಣ್ಯ ಇಲಾಖೆ ವಹಿಸಿದೆ. ಮರ ಕೆತ್ತಲು ಮತ್ತು ಸಾಗಿಸಲು ಕಂಟ್ರ್ಯಾಕ್ಟರುಗಳಿಗೆ ಕ್ರಮಬದ್ಧವಾದ ರಹದಾರಿಯನ್ನು ಈ ಸಂಘ ಅರಣ್ಯ ಇಲಾಖೆ ಮೂಲಕ ಒದಗಿಸುತ್ತದೆ.

ಪಪ್ಪಳಿ ಚಕ್ಕೆ

ಗುಳಮಾವು (ಮ್ಯಾಚಿಲಸ್ ಮೆಕರೆಂತಾ) ಮತ್ತು ಪ್ಲಾಸ್ಟಿಕ್ (ಸಿನಮಮ್ ಜೈಲಾನಿಕಂ) ಮರಗಳ ಚಕ್ಕೆಯನ್ನು ಪಪ್ಪಳಿಚಕ್ಕೆ ಎಂಬ ಒಂದೇ ಹೆಸರಿನಲ್ಲಿ ಅರಣ್ಯ ಇಲಾಖೆ [illegible]ಸಿದ್ದು, ಇವುಗಳನ್ನು ಲಘು ಅರಣ್ಯ ಉತ್ಪನ್ನಗಳೆಂದು (ಎಂ. ಎಫ್. ಪಿ.) ಸಂಗ್ರಹಿಸಲು ಅವಕಾಶ ಕೊಡಲಾಗಿದೆ. ಚಕ್ಕೆಯಾಗಿ ಮರಗಳನ್ನು ಕ್ರಮಬದ್ಧವಾಗಿ ಕೆತ್ತಿದರೆ ಮರಕ್ಕೆ ಏನೂ ಅಪಾಯವಿಲ್ಲವೆಂದು ಅರಣ್ಯ ಇಲಾಖೆ ಹೇಳುತ್ತದೆ.

ಈ ತೊಪ್ಪೆ ಸಂಗ್ರಹಣೆ ಇಷ್ಟು ಕ್ರಮಬದ್ಧವಾದುದಾದರೂ ಸಹ ಗ್ರಾಮಸ್ಥರ ಭಾವನೆಗಳನ್ನು ಹಾಗೂ ಕಾಡಿನ ನಾಶದ ಬಗ್ಗೆ ಅವರ ಆತಂಕವನ್ನು ಗಮನಿಸಿ ಸೂರ್ಯಾಚಾರ್ ತಮ್ಮ ವಲಯದಲ್ಲಿ ತೊಪ್ಪೆಯ ಸಂಗ್ರಹಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಆಜ್ಞೆ ಮಾಡಿದ್ದಾರೆ. ಹಾಗೂ ಗುಳಮಾವಿನ ತೊಪ್ಪೆ, ಪಪ್ಪಳಿ ಚಕ್ಕೆ ಪದದ ವ್ಯಾಪ್ತಿಗೆ ಬರುವುದೇ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಲು ಉನ್ನತಾಧಿಕಾರಿಗಳನ್ನು ಕೋರಿದ್ದಾರೆ. ಸದರಿ ಲಾರಿಯವರಿಂದ ಪಾತರಿಗಾಗಿ ಎರಡು ಸಾವಿರ ರೂ.ಗಳನ್ನು ಠೇವಣಿ ಇರಿಸಿಕೊಂಡಿದ್ದಾರೆ.

ಆದರೆ, ತೊಪ್ಪೆಯ ವಹಿವಾಟಿನಿಂದ ಗಿರಿಜನ ಸೇವಾ ಸಹಕಾರವೊಂದಕ್ಕೇ [illegible] ವಾಗುವುದರಿಂದ ತೊಪ್ಪೆಯ ಸಂಗ್ರಹಣೆಗೆ ರೈತರು ಅಡ್ಡಿ ಮಾಡಬಾರದೆಂದು [illegible]ರುವ ಅವರು, ಸಂಗ್ರಹಣೆಯಲ್ಲಿ ಅಕ್ರಮಗಳು ನಡೆಯದಂತೆ ಅಥವಾ ಕಂಟ್ರ್ಯಾಕ್ಟರುಗಳು ಇತರ ಅರಣ್ಯ ಉತ್ಪನ್ನಗಳನ್ನು [illegible] ಸಾಗಣೆ ಮಾಡದಂತೆ ತಾವು ಬಿಗಿ [illegible] ಕೆಗೆದುಕೊಳ್ಳುವುದಾಗಿ ಭರವಸೆ [illegible]ದ್ದಾರೆ. ಅಂತಹ ಅಕ್ರಮಗಳು [illegible] ಬಂದಲ್ಲಿ ಕೂಡಲೇ ತಮ್ಮ ಗಮನಕ್ಕೆ ತರುವಂತೆಯೂ ಅವರು ಮನವಿಮಾಡಿ[illegible].

'ಬಡವ' ಸಂ|| ಮೇಲೆ ಹಲ್ಲೆ

ಚಿಕ್ಕಮಗಳೂರು: ಇಲ್ಲಿಂದ ವಾರ[illegible] ಪ್ರಕಟವಾಗುವ 'ಬಡವ' [illegible] ಪತ್ರಿಕೆಯ ಸಂಪಾದಕ ಬಿ. ಎಸ್. [illegible] ಅವರ ಮೇಲೆ [illegible] ರಾತ್ರಿ [illegible] [illegible] ಹಲ್ಲೆ ನಡೆಸಿ[illegible] [illegible].

ಮಂಗನ ಕಾಯಿಲೆ ಬಗ್ಗೆ ಮುನ್ನೆಚ್ಚರಿಕೆ

ಶೃಂಗೇರಿ: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಹರಡಿರುವ ಮಂಗನ ಕಾಯಿಲೆಯು ಶೃಂಗೇರಿ ತಾಲ್ಲೂಕಿಗೂ ವ್ಯಾಪಿಸಿದೆಯೆಂಬ ವದಂತಿಯು ಸುಳ್ಳು ಎಂದು ಉನ್ನತ ಮಟ್ಟದ ತನಿಖೆಯಿಂದ ಸ್ಥಿರಪಟ್ಟಿದೆ.

ಆದರೂ ಕಾಯಿಲೆಯು ಶೃಂಗೇರಿ, ಕೊಪ್ಪ, ನ. ರಾ. ಪುರ ತಾ||ಗಳಿಗೆ ಹೊಂದಿಕೊಂಡಂತಿರುವ ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಣಿಸಿಕೊಂಡಿರುವುದರಿಂದ ಈ ತಾ||ಗಳ ಜನರೂ ಸಹ ಅದರ ಬಗ್ಗೆ ಜಾಗರೂಕರಾಗಿರಬೇಕೆಂದು ಜಿಲ್ಲಾ ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಕಾಯಿಲೆ ಲಕ್ಷಣಗಳು

ಮೈ ಕೈ ನೋವು, ತಲೆನೋವು, ವಿಪರೀತ ಜ್ವರ ಮತ್ತು ಮೂಗು, ಕಿವಿ ಮತ್ತಿತರ ದ್ವಾರಗಳಿಂದ (ಗುದದ್ವಾರದಲ್ಲಿ ಕೂಡ) ರಕ್ತಸ್ರಾವವಾಗುತ್ತದೆ. ಈ ಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣ ಸರ್ಕಾರಿ ಆಸ್ಪತ್ರೆಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿ[illegible]ಬೇಕು. ರೋಗ ಮಂಗನ ಕಾಯಿಲೆ [illegible] ಸ್ಥಿರಪಟ್ಟರೆ ಸೂಕ್ತ ಚಿಕಿತ್ಸೆ ನೀಡ[illegible]ವುದು.

ಮಂಗಗಳು ಸತ್ತಿದ್ದರೆ ಅವುಗಳ [illegible] ಮುಟ್ಟಬಾರದು ಎಂದು ತಿಳಿಸಲಾ[illegible] ಗಂಟೆಯೊಳಗಾಗಿ ಅವುಗಳ ಶ್ವಾಸಕೋಶ, ಮಿದುಳು ಮತ್ತು ಮೂತ್ರಪಿಂಡದ [illegible]ಗಳನ್ನು ಶಿವಮೊಗ್ಗದಲ್ಲಿ ಪರೀಕ್ಷೆ ಮಾಡಬೇಕಾಗಿದೆ. ಆದ್ದರಿಂದ ಮಂಗ ಸತ್ತಿದ್ದು ಕಂಡರೆ ಕೂಡಲೇ ಹತ್ತಿರದ ಆಸ್ಪತ್ರೆಗೆ ಅಥವಾ [illegible] ಆಸ್ಪತ್ರೆಯ [illegible] [illegible] ಕೋರಲಾಗಿದೆ.

ದಲಿತರ ಮೇಲೆ ಪೋಲೀಸ್ ದೌರ್ಜನ್ಯದ ಆರೋಪ; ರಕ್ಷಣೆಗೆ ಒತ್ತಾಯ

ಚಿಕ್ಕಮಗಳೂರು: ಈ ತಾಲ್ಲೂಕಿನ ಜಕ್ಕನ ಹಳ್ಳಿ ಪೋಲೀಸ್ ಠಾಣೆಯ ಪೋಲೀಸ್ ಪೇದೆಗಳಾದ ಡಿಸೋಜ ಮತ್ತು ಕಲ್ಲೇಶ ಎಂಬುವವರು ಮಾರ್ಚ್ ೨೮ರಂದು ಜಕ್ಕನಹಳ್ಳಿಯ ದಲಿತರ ಕೇರಿಗೆ ಹೋಗಿ ಸುಳ್ಳು ಆರೋಪದ ಮೇಲೆ ಶಂಕರಯ್ಯ ಮತ್ತು ಪುಟ್ಟಯ್ಯ ಎಂಬುವವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಅವರ ಕೈ ಕಾಲುಗಳನ್ನು ಕಟ್ಟಿ ರಕ್ತಬರುವವರೆಗೆ ಹೊಡೆದಿದ್ದಾರೆಂದು ಚಿಕ್ಕಮಗಳೂರು ತಾಲ್ಲೂಕು ದಲಿತ ಸಂಘರ್ಷ ಸಮಿತಿಯು ಆರೋಪಿಸಿದೆ.

ದಲಿತರು ಊರಿನ ಬಿಟ್ಟಿ ಕೆಲಸಗಳನ್ನು ಮಾಡಲು ನಿರಾಕರಿಸಿದ್ದರಿಂದ ಇದೇ ಊರಿನ ಕೆಲವರು ಪೋಲೀಸರ ಮೂಲಕ ಈ ರೀತಿ ಕಿರುಕುಳ ನೀಡುತ್ತಿದ್ದಾರೆಂದು ದೂರಲಾಗಿದೆ.

ದೌರ್ಜನ್ಯವೆಸಗಿದ ಪೇದೆಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ದಲಿತರಿಗೆ ರಕ್ಷಣೆ ನೀಡಬೇಕೆಂದು ಸಮಿತಿಯು ಒತ್ತಾಯಿಸಿದೆ.

ರಾಘವೇಂದ್ರ ಸೇವಾ ಸಮಿತಿ ಕಾರ್ಯಕಾರಿ ರಚನೆ

ಶೃಂಗೇರಿ: ಇಲ್ಲಿನ ರಾಘವೇಂದ್ರ ಸೇವಾ ಸಮಿತಿಯ ಕಾರ್ಯಕಾರಿ ಮಂಡಲಿಗೆ ಈ ಕೆಳಕಂಡವರು ಪದಾಧಿಕಾರಿಗಳಾಗಿದ್ದಾರೆ: ಕೆ. ಎನ್. ಲಕ್ಷ್ಮಣನ್ (ಅಧ್ಯಕ್ಷ), ಕೆ. ಎನ್. ಶಿವಶಂಕರ್ (ಕಾರ್ಯದರ್ಶಿ), ಕೃಷ್ಣಶೆಟ್ಟಿ ಮತ್ತು ಶ್ರೀಧರಶೆಟ್ಟಿ ಖಜಾಂಚಿಗಳು, ಹಾಗೂ ಶಂಕರ್ (ಸಹಕಾರ್ಯದರ್ಶಿ).

ಸಮಿತಿಯು ರಾಘವೇಂದ್ರ ದೇವಸ್ಥಾನ ನಿರ್ಮಾಣ ಯೋಜನೆಯನ್ನು ಹಾಕಿಕೊಂಡಿದೆ.

ಪ್ರಥಮ ಬಹುಮಾನ ಗಿಟ್ಟಿಸಿದ "ಪತ್ರೆ ಸಂಗಪ್ಪ"

ನರಸಿಂಹರಾಜಪುರ: ತುಮಕೂರಿನಲ್ಲಿ ಜರುಗಿದ ರಾಜ್ಯಮಟ್ಟದ ಯುವಜನ ಮೇಳದಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ನರಸಿಂಹರಾಜಪುರದ ಸಪ್ತಶ್ರೀ ಯುವಕ ಸಂಘದವರು ಅಭಿನಯಿಸಿದ "ಪತ್ರೆ ಸಂಗಪ್ಪನ ಕೊಲೆ" ನಾಟಕಕ್ಕೆ ಪ್ರಥಮ ಬಹುಮಾನ ಲಭಿಸಿದೆ.

ಶೃಂಗೇರಿ ಪೌರಸಮಿತಿ ಸಭೆ

ಶೃಂಗೇರಿ: ಇಲ್ಲಿನ ಪೋಲೀಸ್ ಇಲಾಖೆಯ ಆಶ್ರಯದಲ್ಲಿರುವ ಪೌರ ಸಮಿತಿಯ ಸಭೆಯು ಏ. ೩ರಂದು ನಡೆಯಿತು. ಆ ಸಭೆಯಲ್ಲಿ ಭಾಗವಹಿಸಿದ್ದ ಪುರಸಭೆ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು, ಊರಿನ ಗಣ್ಯರು, ಪೋಲೀಸ್ ಅಧಿಕಾರಿಗಳು, ಶಾಂತಿ, ಸೌಹಾರ್ದ ಹಾಗೂ ಸುವ್ಯವಸ್ಥೆ ಪಾಲನೆ ಬಗ್ಗೆ ಚರ್ಚಿಸಿದರು.

ಭಾವಗೀತೆ ಸ್ಪರ್ಧೆ ಪ್ರಥಮ ಬಹುಮಾನ

ಶೃಂಗೇರಿ: ರಾಜ್ಯಮಟ್ಟದ ಯುವಜನ ಮೇಳದಲ್ಲಿ ನಡೆದ ಭಾವಗೀತೆ ಸ್ಪರ್ಧೆಯಲ್ಲಿ ಇಲ್ಲಿನ ಶಾರದಾ ಯುವಕ ಕಲಾ ಸಂಘದ ಕೆ. ಎನ್. ಬಾಲಚಂದ್ರ ಅವರು ಪ್ರಥಮ ಬಹುಮಾನ ಪಡೆದಿದ್ದಾರೆ.

ದಲಿತರ ಭೂಮಿ ಮಂಜೂರು ತಡ: ದಲಿತ ಸಂಘರ್ಷ ಸಮಿತಿ ಎಚ್ಚರಿಕೆ

ಚಿಕ್ಕಮಗಳೂರು: ಈ ತಾಲ್ಲೂಕಿನ ೨೫ ಕ್ಕೂ ಹೆಚ್ಚು ಗ್ರಾಮಗಳ ೫೦೦ ಜನ ಭೂಮಿ ಇಲ್ಲದ ದಲಿತರು ಸುಮಾರು ೧೫೦೦ ಕ್ಕೂ ಹೆಚ್ಚು ಎಕರೆ ಭೂಮಿಗಾಗಿ ಅರ್ಜಿ ಸಲ್ಲಿಸಿ ಮೂರ್ನಾಲ್ಕು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಆದರೆ ಅವರಿಗೆ ಇದುವರೆಗೆ ಹಕ್ಕುಪತ್ರ ದೊರೆತಿಲ್ಲ. ಇದರಿಂದ ಸಾಲ ಸೌಲಭ್ಯ ಪಡೆಯಲು ಅಡಚಣೆಯಾಗಿದೆ.

ಹಕ್ಕುಪತ್ರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಂತ್ರಿಗಳಿಗೆ ತಾಲ್ಲೂಕು ದಲಿತ ಸಂಘರ್ಷ ಸಮಿತಿಯು ಮಾರ್ಚ್ ೨೮ ರಂದು ಮನವಿ ಸಲ್ಲಿಸಿದೆ. ಇನ್ನು ಒಂದು ತಿಂಗಳ ಒಳಗಾಗಿ ಹಕ್ಕುಪತ್ರಗಳನ್ನು ನೀಡದಿದ್ದರೆ ಹೋರಾಟ ನಡೆಸುವುದಾಗಿ ಸಮಿತಿಯು ಎಚ್ಚರಿಕೆ ನೀಡಿದೆ.

ಕಿಗ್ಗಕ್ಕೆ ಸೀಮೆಯೆಣ್ಣೆ ಸಾಲುತ್ತಿಲ್ಲ

ಕಿಗ್ಗದಲ್ಲಿ ಸೀಮೆಯೆಣ್ಣೆ ಸಾಕಷ್ಟು ಸಿಗುತ್ತಿಲ್ಲ. ಇಲ್ಲಿ ಸುಮಾರು ೭೦೦ ಕಾರ್ಡುಗಳಿದ್ದು ಅವರಲ್ಲಿ ೧೦೦ ನಿವಾಸಿಗಳಿಗೆ ಹೋದರೂ ೬೦೦ ಕಾರ್ಡುಗಳಿಗೆ ಕನಿಷ್ಠ ೧೨೦೦ ಲೀಟರ್ ಸೀಮೆಯೆಣ್ಣೆ ಯನ್ನಾದರೂ ಒದಗಿಸಬೇಕು–ಎಂದು ನಾಗರಿಕ ಪೂರೈಕೆ ಅಧಿಕಾರಿಗಳಲ್ಲಿ ಕಿಗ್ಗದ ನಾಗರಿಕರ ಅಹವಾಲು.

ಬಸ್ ಸೌಕರ್ಯ ಬೇಕು

ಬಸರಿಕಟ್ಟೆ ಮಾರ್ಗದಲ್ಲಿ ಓಡಾಡುತ್ತಿರುವ ಶಂಕರ್ ಕಂಪನಿಯವರ ಐದು ಬಸ್ಸುಗಳಲ್ಲಿ ಒಂದನ್ನಾದರೂ ಬಿಳಲುಕೊಪ್ಪ–ಕಲ್ಲುಗುಡ್ಡೆ–ಶಾಂತಿಗ್ರಾಮ ಮಾರ್ಗದಲ್ಲಿ ಹಾದುಹೋಗುವಂತೆ ಓಡಿಸಬೇಕೆಂದು ಸ್ಥಳೀಯ ವಿವೇಕಾನಂದ ಯುವಕ ರೈತ ಸಂಘದ ನಿಯೋಗವೊಂದು ಕಳೆದ ವರ್ಷ ಶಂಕರ್ ಕಂಪನಿಯವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾಗ ಈ ಬಗ್ಗೆ ಪ್ರಯತ್ನಿಸುವುದಾಗಿ ಭರವಸೆ ಸಿಕ್ಕಿತ್ತಂತೆ. ಆದಾಗ್ಯೂ ಒಂದೂವರೆ ವರ್ಷವಾದರೂ ಇನ್ನೂ ಬೇಡಿಕೆ ಈಡೇರಿಲ್ಲವಂತೆ. "ಈ ಮಾರ್ಗ ಪ್ರಸಿದ್ಧ ಜಲ್ಲಿಯಾಗಿದ್ದು ಮೋರಿಗಳೆಲ್ಲವೂ ನಿರ್ಮಾಣಗೊಂಡಿವೆ. ಕಂಪನಿಯವರು ಈ ವಿಷಯದಲ್ಲಿ ಬೇಗನೆ ಗಮನಹರಿಸಬೇಕು" ಎಂದು ಈ ಭಾಗದ ಗ್ರಾಮಸ್ಥರ ಅಹವಾಲು. ಇಲ್ಲಿನ ಹತ್ತಾರು ಹಳ್ಳಿಗಳವರು ಈಗ "ಪ್ರಾಣ ಹೋಗುತ್ತಿಂದರೂ" ಕೊಪ್ಪಕ್ಕೆ ಇಲ್ಲವೇ ಜಯಪುರಕ್ಕೆ ಮೂರ್ನಾಲ್ಕು ಮೈಲಿ ನಡೆದು ಬಸ್ ಹಿಡಿಯಬೇಕಾಗಿದೆ.

ಶಂಕರ್ ಕಂಪನಿ ಉತ್ತರ: ಕಂಪನಿಯಲ್ಲಿರುವ ಮೈಲಿಯ ಲೆಕ್ಕದ ಬ್ಯಾಟಾ ಪದ್ಧತಿಯಿಂದಾಗಿ ಹಳ್ಳಿಗಾಡಿನ ರಸ್ತೆಗಳಿಗೆ ಹೋಗಲು ಡ್ರೈವರ್‌ಗಳು ಒಪ್ಪುವುದಿಲ್ಲ. ಅಲ್ಲದೆ ಬಸ್ಸಿಗೆ ಜಖಂ ಕೂಡ ಜಾಸ್ತಿ. ಆದ್ದರಿಂದ ಸದ್ಯಕ್ಕೆ ಈ ಮಾರ್ಗದಲ್ಲಿ ಬಸ್ಸು ಓಡಿಸುವುದು ಸಾಧ್ಯವಿಲ್ಲ ಎಂದು ಎ. ಮನೋಹರರಾವ್ ತಿಳಿಸಿದ್ದಾರೆ.

ದಲಿತರ ಭೂಮಿಯಲ್ಲಿ ದ. ಸಂ. ಸ. ನೇತೃತ್ವದ ಜಾಗ ಸವರುವ ಕಾರ್ಯ

ಹೊಸಕೊಪ್ಪ: ಈಗ್ಗೆ ಸುಮಾರು ಎಂಟತ್ತು ವರ್ಷಗಳ ಹಿಂದೆ ದರ್ಖಾಸ್ತು ಸಲ್ಲಿಸಿದ್ದ ಅವಗೋಡು ಪಂಚಾಯ್ತಿಗೆ ಸೇರಿರುವ ತಮ್ಮಡವಳ್ಳಿಯ ೩೦ ಜನ ದಲಿತರಿಗೆ ಈಚೆಗೆ ಸುಮಾರು ೬೦ ಎಕರೆ ಜಮೀನು ಮಂಜೂರಾಗಿದ್ದು, ಈಗ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಅಲ್ಲಿ ಸಾಮೂಹಿಕವಾಗಿ ಜಾಗ ಸವರುವ ಕೆಲಸ ನಡೆಯುತ್ತಿದೆ.

ಜಾತೀರಾತಿಗೆ 'ಮುಂಜಾವು' ಅತ್ಯಂತ ಪ್ರಶಸ್ತ ಮಾಧ್ಯಮ

ಮೇಗುಂದಾ ಹೋಬಳಿ: ಹಲವು ಸಮಸ್ಯೆಗಳು

ಜಯಪುರ: ಇತ್ತೀಚೆಗೆ ಹೊರಟು ಮೇಗುಂದಾ ಹೋಬಳಿಯ ಹಳ್ಳಿಗಳಲ್ಲಿ ನಾಲ್ಕು ದಿನ ಪ್ರವಾಸ ಮಾಡಿದಾಗ ಗ್ರಾಮಸ್ಥರು ಪತ್ರಿಕೆಯೊಂದಿಗೆ ಹೇಳಿಕೊಂಡ ಸಮಸ್ಯೆಗಳು ಹತ್ತು ಹಲವು. ಬರೀ ಬೆಟ್ಟಗುಡ್ಡಗಳಿಂದ ಕೂಡಿ ದುರ್ಗಮವಾಗಿರುವ ಈ ಹೋಬಳಿಯಲ್ಲಿ ಎದ್ದುಕಾಣುವ ಸಮಸ್ಯೆ ಸಂಪರ್ಕ ರಸ್ತೆಗಳು ಮತ್ತು ವಾಹನ ಸೌಕರ್ಯದ್ದು.

ಕೂಳೂರು–ಹುಲಿಗರಡಿ ರಸ್ತೆ

ಜಯಪುರದ ಹತ್ತಿರ ಕೂಳೂರು ಸೇತುವೆಯಿಂದ ಹುಲಿಗರಡಿ ಗ್ರಾಮದ ಮೂಲಕ ಕೊಪ್ಪ ಹೆಗ್ಗಾರುಕುಡಿಗೆ ರಸ್ತೆಗೆ ಸಂಪರ್ಕ ಕಲ್ಪಿಸುವ ಲೋಕೋಪಯೋಗಿ ಇಲಾಖೆಯ ರಸ್ತೆಗೆ ದುರಸ್ತಿಯೇ ಇಲ್ಲವಾಗಿದೆ. ಹುಲಿಗರಡಿಯಿಂದ ಮುಂದೆ ಒಂದುಕಡೆ ಭೂಕುಸಿತದಿಂದ ರಸ್ತೆ ಈಚೆಗೆ ಪೂರ್ತಿ ತುಂಡಾಗಿದ್ದು, ಅಲ್ಲಿಂದ ಮುಂದೆ ಸಂಚಾರ ಸಾಧ್ಯವಿಲ್ಲ. ಆದರೆ ಈ ರಸ್ತೆ ಬಗ್ಗೆ ಇಲಾಖೆ ಎಷ್ಟು ಮಾಹಿತಿ ಹೀನವಾಗಿದೆಯೆಂದರೆ ಪ್ರತಿ ವರ್ಷ ಈ ಹೊತ್ತಿಗೆ ಒಮ್ಮೆ ಇಡೀ ರಸ್ತೆಗೆ ಹುಡಿಮಣ್ಣು ಹಾಕುವಂತೆ ಈ ವರ್ಷವೂ ಸಹ ರಸ್ತೆ ತುಂಡಾದಲ್ಲಿಂದ್ಲ ಮುಂದಕ್ಕೂ ಮಣ್ಣು ಹಾಕಿದ್ದಾರೆ. ಇಂಥ ದುರಸ್ತಿಯಿಂದ ಏನು ಪ್ರಯೋಜನ ಎಂಬುದು ಇಲಾಖೆಗೆ ಗೊತ್ತಿಲ್ಲ. ಯಾಂತ್ರಿಕವಾಗಿ ಕೆಲಸ ಮಂಜೂರಾಗುತ್ತದೆ, ಬಿಲ್ಲು ಬರುತ್ತದೆ, ಬಟವಾಡೆಯಾಗಿ ಹೋಗುತ್ತದೆ.

ವಿದ್ಯುಚ್ಛಕ್ತಿ

ಈ ಗ್ರಾಮದಲ್ಲಿ ಹೋದ ವರ್ಷ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಲಾಗಿದೆ. ಆದರೆ ರಾತ್ರಿ ಚಿಮಣಿ ಬೆಳಕಿನಷ್ಟೂ ಬೆಳಕಿಲ್ಲ, ಚಿಮಣಿ ಉರಿಸುವುದೂ ತಪ್ಪಿಲ್ಲ. ಜ. ೨೪ ರಂದು ಶಾಸಕ ಗೋವಿಂದಗೌಡರ ಎದುರು ಬಾಳೆಹೊನ್ನೂರಿನ ವಿದ್ಯುಚ್ಛಕ್ತಿ ಇಲಾಖೆ ಅಧಿಕಾರಿಗಳು ೧೫ ದಿನದಲ್ಲಿ ವ್ಯವಸ್ಥೆ ಸರಿಪಡಿಸುವುದಾಗಿ ಒಪ್ಪಿಕೊಂಡಿದ್ದರು. ಆದರೆ ಇನ್ನೂ ಚಿಮಣಿ ಉರಿಸುವುದು ಮುಂದುವರಿದಿದೆ.

ಟಾರು ರಸ್ತೆ?

ಜಯಪುರ – ಬಸರಿಕಟ್ಟೆ ರಸ್ತೆಯಲ್ಲಿ ಬಿಳಲುಕೊಪ್ಪದಿಂದ ಮುಂದೆ ಬಸರಿಕಟ್ಟೆವರೆಗೆ ಟಾರು ಹಾಕದೆ ಬಾಕಿ ಉಳಿದಿದ್ದ ಭಾಗಕ್ಕೆ ಕಳೆದ ವರ್ಷ ಟಾರು ಹಾಕಿದ ರೀತಿ ಹೀಗಿದೆ: ಕೆಲವು ತಿರುಕಾಸುಗಳಲ್ಲಿ ಹಾಗೂ ಮಧ್ಯೆ ಮಧ್ಯೆ ಒಂದೊಂದು ಕಡೆ ಒಂದು ೮–೧೦ ಗಜದಷ್ಟು ದೂರ–ಹೀಗೆ ಅಲ್ಲಲ್ಲಿ ಟಾರು ಕಾಣಿಸಿದ್ದಾರೆ. ಇದೇನು ಬೇಕೆಂದೇ ಹೀಗೆ ಮಾಡಿದ್ದೋ ಅಥವಾ ಪೂರ್ತಿ ಟಾರು ಹಾಕುವ ಕಂಟ್ರಾಕ್ಟಿನಲ್ಲಿ ಆದ ಕೆಲಸ ಇಷ್ಟೇಯೋ ಎಂಬುದು ಸ್ಥಳೀಯ ಪಂಚಾಯ್ತಿಗಳವರಿಗೆ ಗೊತ್ತಿಲ್ಲವಂತೆ. ಅದರ ಬಿಲ್ ಪಾಸಾಯಿತೇ ಎಂಬುದೂ ಗೊತ್ತಿಲ್ಲ.

ವಿಚಿತ್ರ ಯೋಜನೆ

ಇಲ್ಲೊಂದು ವಿಚಿತ್ರ ಯೋಜನೆಯ ಉದಾಹರಣೆಯಿದೆ. ಗಿರಿಜನರೇ ವಾಸವಾಗಿರುವ ಮೆಣಸಿನಹಾಡ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಟಾರು ಹಾಕಿಸಲು ವಿಶೇಷವಾಗಿ ೮ ಕೋಟಿ ರೂ. (ಈಗ ೧೫ಕೋಟಿ?) ಮಂಜೂರಾಗಿದೆ. ಆದರೆ ಅದು ಕಲ್ಲುಗುಡ್ಡೆಯಿಂದ ಮುಂದಕ್ಕೆ ಮಾತ್ರ. ಕಲ್ಲುಗುಡ್ಡೆಯವರೆಗೇ ಸರಿಯಾದ ಜಲ್ಲಿಯ ರಸ್ತೆಯಿಲ್ಲ, ಇರುವ ರಸ್ತೆಗೆ ದುರಸ್ತಿ ಅಷ್ಟಕ್ಕಷ್ಟೆ. ಈ ರಸ್ತೆಯಲ್ಲೇ ವಾಹನಗಳು ಸಂಚರಿಸಲು ಕಷ್ಟವಾಗಿರುವಾಗ ಮೇಲಿನ ಟಾರು ರಸ್ತೆಯಲ್ಲಿ ಯಾವ ವಾಹನ ಓಡಾಡಬೇಕು? ಎಂದು ಕೇಳುತ್ತಾರೆ ಮೆಣಸಿನ ಹಾಡ್ಯದವರು. ಇದರ ಬದಲು ದುರಸ್ತಿಯಾಗಬೇಕಾಗಿರುವ ಎರಡು ಸೇತುವೆಗಳನ್ನು ದೃಢಪಡಿಸಿದ್ದರೆ ಎಷ್ಟೋ ಉಪಯೋಗವಾಗುತ್ತಿತ್ತು ಎನ್ನುತ್ತಾರೆ.

ಕೃಷಿ ಶಾಲೆಗೆ ಆಹ್ವಾನ

ಚಿಕ್ಕಮಗಳೂರು: ರಾಜ್ಯ ಸರ್ಕಾರದ ಕೃಷಿ ಇಲಾಖೆಯು ರೈತಮಕ್ಕಳಿಗೆ ಮೇ ತಿಂಗಳಿನಿಂದ ಲಿಂಗದಹಳ್ಳಿಯಲ್ಲಿರುವ ಕೃಷಿ ಪಾಠಶಾಲೆಯಲ್ಲಿ ಕೃಷಿ ಶಿಕ್ಷಣವನ್ನು ನೀಡುವುದು. ಶಿಕ್ಷಣದ ಅವಧಿ 10 ತಿಂಗಳು.

ಈ ಶಾಲೆಗೆ ಸೇರಬಯಸುವವರು ಕನಿಷ್ಠ ೭ನೇ ತರಗತಿಯವರೆಗೆ ಓದಿರಬೇಕು. ವಯೋಮಿತಿ ೧೬ ರಿಂದ ೩೫ ವರ್ಷಗಳು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗರಿಷ್ಠ ವಯಸ್ಸು ೩೮ ವರ್ಷಗಳು. ಶಿಕ್ಷಣದ ಸಲುವಾಗಿ ಶುಲ್ಕವಿರುವುದಿಲ್ಲ. ಪುಕ್ಕಟೆ ವಸತಿ ಸೌಲಭ್ಯವಿರುತ್ತದೆ. ಮತ್ತು ತಿಂಗಳಿಗೆ ೧೫೦ ರೂ. ವಿದ್ಯಾರ್ಥಿವೇತನ ನೀಡಲಾಗುವುದು. ಅರ್ಜಿ ಸಲ್ಲಿಸಲು ಈ ತಿಂಗಳ ೩೦ ಕಡೆಯ ದಿನವಾಗಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಶಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, [illegible]